

## ಭಾರತದಲ್ಲೇ ಸಂಸ್ಕರಣೆ

ಭಾರತ ಸದ್ಯ ಸಂಸ್ಕರಿಸದ ಕಚ್ಚಾ ಚಿನ್ನದ ಡೋರ್ ಬಾರ್‌ಗಳನ್ನು ಲ್ಯಾಟಿನ್ ಅಮೆರಿಕಾದ ದೇಶಗಳಿಂದ ಆಮದು ಮಾಡಿಕೊಳ್ಳಲು ಮುಂದಾಗಿದೆ. ಈಕ್ವೆಡಾರ್, ಪೆರು, ಬೊಲಿವಿಯ, ಕೋಲಂಬಿಯ, ನಿಕಾರಾಗುವ ಮೊದಲಾದ ದೇಶಗಳು ಕೂಡಾ ಈ ಕಚ್ಚಾ ಚಿನ್ನದ ಬಾರ್‌ಗಳನ್ನು ಮಾರಾಟ ಮಾಡಲು ಆಸಕ್ತಿ ತೋರಿಸಿವೆ. ಈಗಾಗಲೇ ಭಾರತದಲ್ಲಿ ಚಿನ್ನವನ್ನು ಸಂಸ್ಕರಿಸುವ ಹಲವು ಘಟಕಗಳಿದ್ದು, ಈ ಮೂಲಕ ಆಮದು ಸುಂಕವನ್ನು ಉಳಿಸಬಹುದಾಗಿದೆ. ಜೊತೆಗೆ ಭಾರತದ ಕೆಲವು ಗಣಿ ಉದ್ಯಮಿಗಳು ಪೆರುವಿನ ಚಿನ್ನದ ಗಣಿಗಳಲ್ಲಿ ಬಂಡವಾಳ ಹೂಡಿಕೆಗೆ ಆಸಕ್ತಿ ತೋರಿಸಿದ್ದಾರೆ ಎನ್ನಲಾಗಿದೆ.

ನಿಯಮಗಳ ಪ್ರಕಾರ ಈ ಬಾರ್‌ಗಳು ಶೇ. 99.5ರಷ್ಟು ಪರಿಶುದ್ಧತೆ ಹೊಂದಿರಬೇಕು. ಬ್ಯಾಂಕ್‌ಗಳ ಖಜಾನೆಯಲ್ಲಿ ಸಂಗ್ರಹವಾಗಿರುವ ಹೆಚ್ಚಿನ ಚಿನ್ನದ ಗಟ್ಟಿಗಳು ಲಂಡನ್ನಿನಲ್ಲಿ ತಯಾರಾದವು. ಇವು ನೇರವಾಗಿ ಗ್ರಾಹಕರ ಅಥವಾ ಆಭರಣ ವ್ಯಾಪಾರಿಗಳ ಕೈ ಸೇರಲಾರವು. ಬುಲಿಯನ್ ವಹಿವಾಟಿಗೆ ಪರವಾನಗಿ ಪಡೆದ ಬ್ಯಾಂಕುಗಳು, ಏಜೆನ್ಸಿಗಳು ಮಧ್ಯವರ್ತಿಗಳಂತೆ ವರ್ತಿಸುತ್ತವೆ.

ಭಾರತದಲ್ಲಿ ಈ ಮೊದಲು ಎಂಎಂಟಿಸಿ (ಮೆಟಲ್ ಆ್ಯಂಡ್ ಮಿನರಲ್ ಟ್ರೇಡಿಂಗ್ ಕಾರ್ಪೊರೇಷನ್) ಹಾಗೂ ಎಸ್‌ಟಿಸಿ (ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್)ಗಳು ಆಮದು ಮಾಡಿಕೊಂಡು ಲೈಸನ್ಸ್ ಪಡೆದ ಬುಲಿಯನ್ ಡೀಲರ್‌ಗಳಿಗೆ ಚಿನ್ನದ ಗಟ್ಟಿಗಳನ್ನು ಮಾರುತ್ತಿದ್ದವು. ಈಗ ಹೆಚ್ಚು ಕಡಿಮೆ ಎಲ್ಲಾ ಬ್ಯಾಂಕುಗಳಿಗೆ ಈ ವಹಿವಾಟಿಗೆ ಅನುಮತಿ ನೀಡಲಾಗಿದೆ. ಇವು ಬಾರ್ ಹಾಗೂ ಬಿಸ್ಕತ್ ರೂಪದಲ್ಲಿ ಪೂರೈಸುತ್ತವೆ. ಒಂದು ಕೆಜಿ ಚಿನ್ನದ ಬಾರ್ ಶೇ. 99.5ರಷ್ಟು ಪರಿಶುದ್ಧತೆ ಹೊಂದಿದ್ದರೆ, 100 ಗ್ರಾಂ ತೂಕದ ಬಿಸ್ಕತ್ ಶೇ. 99.9ರಷ್ಟು ಪರಿಶುದ್ಧತೆ ಹೊಂದಿರುತ್ತದೆ. ಆಭರಣ ತಯಾರಿಸುವಾಗ ಇದಕ್ಕೆ ನಿಗದಿತ ಪ್ರಮಾಣದಲ್ಲಿ ತಾಮ್ರ ಅಥವಾ ಬೆಳ್ಳಿ ಸೇರಿಸಲಾಗುವುದು. ಹಾಲ್‌ಮಾರ್ಕ್ ಇರುವ ಆಭರಣ ಶೇ. 92ರಷ್ಟು ಪರಿಶುದ್ಧತೆ ಹೊಂದಿರುತ್ತದೆ.

ಚಿನ್ನದ ದರ ಹೆಚ್ಚಾಗಿ ಲಂಡನ್ನಿನಲ್ಲಿ ನಿರ್ಧಾರವಾಗುತ್ತದೆ. ಬೆಳಿಗ್ಗೆ 10.30ಕ್ಕೆ, ಮಧ್ಯಾಹ್ನ 3ಕ್ಕೆ ದರವನ್ನು ನಿರ್ಧರಿಸಲಾಗುತ್ತದೆ. ಇದನ್ನು ನಿರ್ಧರಿಸುವುದು ಲಂಡನ್ ಗೋಲ್ಡ್ ಫಿಕ್ಸಿಂಗ್ ಲಿಮಿಟೆಡ್ ಎಂಬ ಕಂಪೆನಿ. ಇದರಲ್ಲಿ ಎಚ್‌ಎಸ್‌ಬಿಸಿ, ಡಾಯಿಚ್ ಬ್ಯಾಂಕ್ ಮೊದಲಾದ ಬ್ಯಾಂಕ್‌ಗಳಿಗೆ ಸೇರಿದ ಐವರು ಸದಸ್ಯರು ಇರುತ್ತಾರೆ. ಇದು ಅತ್ಯಂತ ಸಂಕೀರ್ಣವಾದದ್ದು. ಅಂದರೆ ಡೀಲರ್ ನಿಗದಿ ಪಡಿಸುವ ದರವನ್ನು ಅವಲಂಬಿಸಿರುತ್ತದೆ. ಕೆಲವೊಮ್ಮೆ ಸ್ಥಳೀಯ ಅಂಶಗಳೂ ದರದ ಮೇಲೆ ಪರಿಣಾಮ ಬೀರುತ್ತವೆ. ಉದಾಹರಣೆಗೆ ಷೇರು ಮಾರುಕಟ್ಟೆಯ ಏರಿಳಿತ.

ಭಾರತಕ್ಕೆ ಈ ಮೊದಲು ಸ್ವಿಸ್ ಹಾಗೂ ಇನ್ನಿತರ ಯುರೋಪಿಯನ್ ದೇಶಗಳ ಚಿನ್ನದ ಗಟ್ಟಿಗಳು ಪೂರೈಕೆಯಾಗುತ್ತಿದ್ದವು. ಈಗ ಸಿಂಗಪುರ, ದುಬೈ, ಟರ್ಕಿಯಂತಹ ದೇಶಗಳಿಂದ ಪೂರೈಕೆಯಾಗುತ್ತದೆ. ಡೀಲರ್‌ಗಳು ಆಭರಣ ವರ್ತಕರಿಗೆ ಅಥವಾ ಇನ್ನಿತರ ಗ್ರಾಹಕರಿಗೆ ಮಾರುವಾಗ 10 ಗ್ರಾಮಿಗೆ 300– 400 ರೂಪಾಯಿ ಲಾಭ ಇಟ್ಟುಕೊಳ್ಳುವುದುಂಟು. ಮುಂಬಯಿ ಮಾರುಕಟ್ಟೆಗಿಂತ ಬೆಂಗಳೂರು ಮಾರುಕಟ್ಟೆಯಲ್ಲಿ ದರ ಸ್ವಲ್ಪ ಜಾಸ್ತಿ. ಆಭರಣದ ಮೇಲೆ ಶೇ. 1ರಷ್ಟು ವ್ಯಾಟ್ ಹಾಕಲಾಗಿದ್ದು, ತಯಾರಕರು ಇದನ್ನು ಗ್ರಾಹಕರಿಂದ ವಸೂಲು ಮಾಡುತ್ತಾರೆ.